**O.S.No.5/2014 DW.2**

ದಿನಾಂಕಃ-18-11-2021 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ-ಶ್ರೀ.ಎಸ್.ಕೆ.ಎಚ್ ವಕೀಲರಿಂದ ಪ್ರತಿವಾದಿ-2 ಎ ದಿಂದ ಪ್ರತಿವಾದಿ-2 ಈ ಪರವಾಗಿ**

- ನಾನು ಒಂದನೇ ವರ್ಷದ ಬಿ.ಎ. ಪದವಿವರೆಗೆ ವ್ಯಾಸಾಂಗ ಮಾಡಿದ್ದೇನೆ. ಕನ್ನಡ ಮತ್ತು

ಆಂಗ್ಲ ಭಾಷೆ ಎರಡರಲ್ಲೂ ಓದಲು - ಬರೆಯಲು ಬರುತ್ತದೆ. ವಕೀಲರಿಗೆ ಕೈಪಿಯತ ಹಾಕಲು

ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ನನ್ನ ತಂದೆಯ ಹೆಸರು ಪರಸಪ್ಪ. ಮಕ್ಕಳ ಪೈಕಿ ಮೊದಲನೇಯದವರು ನೀಲಪ್ಪ, ಶಿವಪ್ಪ, ಚಿನ್ನವ್ವ, ಶ್ರೀಮಂತೆವ್ವ, ಮುರುಳಿ, ಸೋನವ್ವಾ, ಸುಶೀಲಾಬಾಯಿ, ಸಮಿತ್ರಾಬಾಯಿ, ಜಯವಂತ, ಗೋಪಾಲ, ಸುರೇಶ. ಶಿರಗುಪ್ಪಿ ಗ್ರಾಮದಲ್ಲಿ ಸರ್ವೆ ನಂ.20 ಕ್ಷೇತ್ರ 31 ಎಕರೆ 4-5 ಗುಂಟಾ, ಸರ್ವೆ ನಂ.137/2+2 ಅದರಲ್ಲಿ 37 ಗುಂಟಾ. ಸಿಟಿಎಸ್.ನಂ.5222/3, 5222/7, 5325 ಇವು ಸುಶೀಲಾಬಾಯಿ ಖರೀದಿ ಪಡೆದಿದ್ದರು. ಸರ್ವೆ ನಂ.64 ಕ್ಷೇತ್ರ 24 ಎಕರೆ 34 ಗುಂಟಾ ನಮ್ಮ ತಂದೆ ಕಳಸಪ್ಪ ಖರೀದಿ ಮಾಡಿದ್ದರು. ಸರ್ವೆ ನಂ.6/4 ಸುಶೀಲಾಬಾಯಿ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ 3 ಸ್ವತ್ತುಗಳನ್ನು ಸುಶೀಲಾಬಾಯಿ ಖರೀದಿಸಿದ್ದು ಅವುಗಳ ಮೂಲ ಪ್ರತಿಗಳು ನನ್ನ ಬಳಿ ಇವೆ. ಅವುಗಳು ನನ್ನ ಬಳಿ ಇದೆ ಅಂತಾ ನೋಡಬೇಕು. ನೋಡಿ ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇಲ್ಲ. ಸಿಟಿಎಸ.ನಂ.5325 ಸ್ವತ್ತನ್ನು 1973 ರಲ್ಲಿ ಖರೀದಿಸಿದ್ದಾರೆ. ಸರ್ವೆ ನಂ.48 ಪ್ಲಾಟ ನಂ.24 ರ ಜೊತೆಗೆ ಇದನ್ನು ಸಿಟಿಎಸ್ 5222/7 ರ ಜೊತೆಗೆ ಅದಲಾ-ಬದಲಿ ಮಾಡಿಕೊಂಡಿದ್ದೇವೆ. 1967 ರಲ್ಲಿ ನಮ್ಮ ತಂದೆ ಸ್ವತ್ತು ಖರೀದಿಸಿದ್ದರು. ಸ್ವತ್ತುಗಳನ್ನು ಸುಶೀಲಾಬಾಯಿ ನಮ್ಮ ತಂದೆ ಮರಣಾನಂತರ ಖರೀದಿಸಿದ್ದರು. ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸುಶೀಲಾಬಾಯಿ ಜೀವತಾವಧಿಯಲ್ಲಿ ಮೃತ್ಯು ಪತ್ರ ಮಾಡಿರಲಿಲ್ಲ. ಸುಶೀಲಾಬಾಯಿ ಮೃತ್ಯುಪತ್ರ ಮಾಡಿಲ್ಲ ಅಂತಾ ಒಂದು ಖಾಸಗಿ ಪಿರ್ಯಾದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು. ಸದರಿ ಖಾಸಗಿ ದೂರಿನ ಮೇಲೆ ತನಿಖೆಗಾಗಿ ಕಳುಹಿಸಲಾಗಿದ್ದು ಬಿ ವರದಿ ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ವರದಿಯ ಮೇಲೆ ಪ್ರೊಟೆಸ್ಟ ಪಿಟಿಷನ್ ಸಲ್ಲಿಸಿದ್ದೇನೆ ಎಂದರೆ ಸರಿ. ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ದಾಖಲೆಗಳನ್ನು ಕಳುಹಿಸಲಾಗಿತ್ತು. ಮೊದಲು ಖಾಸಗಿ ವಿಧಿ ವಿಜ್ಞಾನ ಕೇಂದ್ರದಿಂದ ವರದಿ ಬಂದಿತ್ತು ಅದಾದನಂತರ ಸರಕಾರಿ ವಿಧಿ ವಿಜ್ಞಾನ ಕೇಂದ್ರದಿಂದಲೂ ವರದಿ ಬಂದಿತ್ತು. ಎರಡು ವಿಧಿ ವಿಜ್ಞಾನ ಕೇಂದ್ರಗಳಿಂದ ಸಮಕಾಲಿನ ದಾಖಲೆಗಳು ಇಲ್ಲದ ಕಾರಣ ಅವುಗಳನ್ನು ವಾಪಸ್ ಮಾಡಲಾಗಿತ್ತು ಎಂದರೆ ಸರಿ. ಪಾಲುದಾರಿಕೆ ಸಂಸ್ಥೆ ಸಿಟಿಎಸ್ ನಂ.5325 ಕ್ಕೆ ಸಂಬಂಧಿಸಿದಂತೆ ಮಾಡಲಾಗಿತ್ತು. ಪಾಲುದಾರಿಕೆ ನೋಂದಾವಣಿ ಮಾಡಲು ಉಪನೋಂದಣಾ ಕಚೇರಿಗೆ

ಹೋಗಲಾಗಿತ್ತು. ಪಾಲುದಾರಿಕೆ ಸಂಸ್ಥೆ ನೋಂದಾವಣಿ ಆಗುವ ಕಾಲಕ್ಕೆ ಖರೀದಿ ಪತ್ರಗಳನ್ನು ನೋಡಿದ್ದೇನೆ. ಸಾಲ ಎಲ್ಲ ಪಾಲುದಾರಿಕೆ ಸಂಸ್ಥೆ ಹೆಸರಿನಲ್ಲಿ ಇತ್ತು. ಪಾಲುದಾರಿಕೆ ಸಂಸ್ಥೆಯ ಒಡಂಬಡಿಕೆ ಪತ್ರದಲ್ಲಿ ಏನೆಲ್ಲ ಷರತ್ತು ವಿಧಿಸಲಾಗಿತ್ತು ಎಂದು ನನಗೆ ಗೊತ್ತಿದೆ. ದಿ:19.04.1985 ರಂದು ನೋಂದಾವಣಿ ಆಗಿದೆ. ಪಾಲುದಾರಿಕೆ ಸಂಸ್ಥೆ ನೋಂದಾವಣಿ ಆದ ಕೂಡಲೇ ಸಿಟಿಎಸ್ ಕ್ಷೇತ್ರದಲ್ಲಿ ಕಟ್ಟಡ ಕಟ್ಟಲಾಗಿತ್ತು. 1995 ರಲ್ಲಿ ಕಟ್ಟಡ ಕಟ್ಟಲಾಗಿತ್ತು. ಸದರಿ ಕಟ್ಟಡವನ್ನು ಬೆಸಮೆಂಟನಿಂದ ಹಿಡಿದು ಗ್ರೌಂಡ್ ಪ್ಲೋರ ಮತ್ತು ಒಂದನೇ ಮಹಡಿ ಕಟ್ಟಡ ಕಟ್ಟಲಾಗಿತ್ತು. ಮೇ:ಹೊಟೇಲ್ ಪ್ರಶಾಂತ ಅಂತಾ ಸದರಿ ಹೊಟೇಲಗೆ ಹೆಸರು ಇಡಲಾಗಿತ್ತು. ನಿಡಿ-406 ನನ್ನ ಸಹೋದರಿ ಸುಶೀಲಾಬಾಯಿಯವರ ಬಳಿ ಮುಂಬೈಯಲ್ಲಿ ಇದೆ. ಸುಶೀಲಾಬಾಯಿಯವರು 55 ರಿಂದ 60 ವರ್ಷಗಳ ವಯೋಮತಿಯವರು ಇರುವಾಗ ಶ್ರೀಮತಿ.ಸುಶೀಲಾಬಾಯಿಯವರು ಮುಂಬೈಗೆ ಹೋಗಿ ವಾಸಮಾಡಿಕೊಂಡು ಇದ್ದಾರೆ. ನಾನು 7-8 ವರ್ಷದವನಿದ್ದಾಗಲೇ ಸುಶೀಲಾಬಾಯಿಯವರು ಮುಂಬೈಗೆ ಹೋಗಿ ಅಲ್ಲಿ ವಾಸಮಾಡಿಕೊಂಡು ಇದ್ದರು. ಅದಕ್ಕಿಂತ ಪೂರ್ವದಲ್ಲಿ ಶಿರಗುಪ್ಪಿಯಲ್ಲಿ ವಾಸ ಇದ್ದರು. 2011 ರಲ್ಲಿ ಸುಶೀಲಾಬಾಯಿರವರು ತೀರಿಕೊಂಡದ್ದರು. ಎಸ್.ಡಿ.ಎಮ್. ಧಾರವಾಡದಲ್ಲಿ ಸುಶೀಲಾಬಾಯಿರವರು ಮೃತರಾಗಿದ್ದರು. ನನಗೆ 5 ಜನ ಮಕ್ಕಳು. ಅವರೆಂದರೆ ಶಶಿಕಾಂತ, ರವೀಂದ್ರ, ಮಂಗಳಾ, ಅನೀಲ, ರಂಗನಾಥ. ಬೆಂಗಳೂರಿನಲ್ಲಿ ಮಂಗಳಾರವರು ಸೀನಿಯರ್ ರಜಿಸ್ಟರ ಆಗಿ ಕೆಲಸ ಮಾಡುತ್ತಿದ್ದಾರೆ. 2002 ರಲ್ಲಿ ನನ್ನ ಮಗಳು ಉಪನೋಂದಣಾ ಅಧಿಕಾರಿಯಾಗಿ ಜಮಖಂಡಿ ಕಾರ್ಯನಿರ್ವಹಿಸುತ್ತಿದ್ದರು ಎಂದರೆ ಸರಿ. ಪೆಬ್ರುವರಿ 2012 ರಲ್ಲಿ ನಾನು ಮತ್ತು 4 ನೇ ಪ್ರತಿವಾದಿ ಪುನಃ ಪಾಲುದಾರಿಕೆ ಸಂಸ್ಥೆಯನ್ನು ಸ್ಥಾಪನೆ ಮಾಡಿದ ಬಗ್ಗೆ ನಿಡಿ-414 ನ್ನು ಮಾಡಿಕೊಂಡಿದ್ದೆವು ಎಂದರೆ ಸರಿ. ಸಾಕ್ಷಿ ನಿಡಿ-414 ನ್ನು ನೋಡಿ ತಮ್ಮ ಸಹಿಯನ್ನು ಗುರುತಿಸುತ್ತಾರೆ. ಅದನ್ನು ನಿಡಿ-414 ಎ ಎಂದು ಗುರುತಿಸಲಾಯಿತು. ದಿ:10.09.1987 ರಂದು ನಾನು ಸುಶೀಲಾಬಾಯಿಯವರಿಗೆ ಮುದ್ರಾಂಕ ಶುಲ್ಕದ ಹಾಳೆಯ ಮೇಲೆ ನಾನು ಪಾಲುದಾರಿಕೆ ಸಂಸ್ಥೆಯಲ್ಲಿ ಮುಂದುವರೆಯುವುದಿಲ್ಲ ಅಂತಾ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಕಾಗದ ಪತ್ರಕ್ಕೆ ಸಹಿ ಹಾಕಿ ಈಗ ಇಲ್ಲ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಶೀಲಾಬಾಯಿಯವರಿಗೆ ಮಂಬೈದಲ್ಲಿ ಆಸ್ತಿಗಳು ಇವೆ. ಮುಂಬೈಯಲ್ಲಿರುವ ಆಸ್ತಿಗಳು ಈಗ ಯಾರಿಗೆ ಹೋಯಿತು ಅಂತಾ ನನಗೆ ಗೊತ್ತಿಲ್ಲ. ಈಗ ಯಾರ ಹೆಸರಿನಲ್ಲಿ ಇವೆ ಎಂದು ಸದರಿ ಕಾಗದ ಪತ್ರಗಳನ್ನು ನಾನು ನೋಡಿಲ್ಲ. ಅದಕ್ಕೆ ಸಂಬಂಧಿಸಿದಂತೆ ದಾವಾ ಹಾಕುವ ಪೂರ್ವದಲ್ಲಿ, ದಾವಾ ಹಾಕಿದ ಮೇಲೆ ಪರಿಶೀಲಿಸಿಲ್ಲ. ಮುಂಬೈಯಿಂದ ಬಂದ ಮೇಲೆ ಸುಶೀಲಾರವರು ಪ್ರತಿವಾದಿ-2 ರವರ ಜೊತೆಗೆ ಇದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಜೊತೆಗೆ ಇದ್ದರು ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಶೀಲಾಬಾಯಿಯವರಿಗೆ 2 ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸಾಕ್ಷಿ ಒಂದೇ ಹೆಸರಿನಿಂದ ಕರೆಯುತ್ತಿದ್ದರು. ಮುಂಬೈಯಲ್ಲಿ ಸುಶೀಲಾಬಾಯಿ ನವೀನ ಶಹಾ ಎಂಬುದಾಗಿ ಗುರುತಿಸಿಕೊಂಡಿದ್ದರು ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ